ಪದಬಂಧ




**ಎಡದಿಂದ ಬಲಕ್ಕೆ**

1. ಆ ಶಾಲೆಯ ಪ್ರತಿ ತರಗತಿಯಲ್ಲೂ ಆಗಿದೆ ಒಳ್ಳೆಯ ಮುನ್ನಡೆ 3
3. ಆತನ ದೌರ್ಭಾಗ್ಯ ಏನೆಂದರೆ ಆತನಿಗೆ ಪಾಲಕರೇ ಇಲ್ಲ 3
4. ಹಲವರಿಗೆ ಬಂದದ್ದು ಒಂದೇ ರೀತಿಯ ಆಲೋಚನೆಯ ಅಲೆ ಅಲೆ 3
6. ಆತ ಹುಂಬನೆಂದು ತಿಳಿದ ನಂತರವೂ ಅನುಚರನಾಗುವುದೇ? 4
7. ಶಂಭುವಿನ ಪೂಜಾ ಕಾರ್ಯ ಮಂಗಳದಾಯಕ ತಾನೇ? 4
9. ನಿತ್ಯವೂ ಕೈಜೋಡಿಸುವುದು ಸೂರ್ಯನಿಗೇ ತಾನೇ? 4
11. ನಡುಗಿಸುತ್ತಿದ್ದ ಚಳಿಯಲ್ಲೂ ಹಾಡಿದ್ದು ನಮ್ಮ ರಾಜ್ಯದ್ದೇ ಹಾಡು 4
15. ಶಿಕ್ಷಕಿಯಷ್ಟೇ ಅಲ್ಲ, ಆಕೆ ಎಲ್ಲರನ್ನೂ ಕಾಪಾಡುವವಳು ಕೂಡ 3
16. ಕರುವನ್ನು ಕರೆತರುವ ಬಗೆಗೆ ಒಂದು ಒಪ್ಪಂದ 3
17. ತರಹೇವಾರಿ ರಾಶಿ ರಾಶಿ ಕಾಯಿಪಲ್ಲೆ 3

**ಮೇಲಿನಿಂದ ಕೆಳಕ್ಕೆ**

1. ಆತನಿಂದ ಪ್ರಮಾದವೊಂದು ತಪ್ಪಿದ್ದು ಇದೇ ಮೊದಲು 3
2. ಸರಿಯಾಗಿ ಕಲಿತಿಲ್ಲ ಎಳ್ಳಿನಾಕಾರದ ಹಣೆಬೊಟ್ಟು 3
3. ಆಳು ಕಾಳು ಎಲ್ಲದಕ್ಕೂ ಇದು ಸರಿಯಾದ ಸಮಯವಲ್ಲ 3
5. ಭೇಷ್, ಎಂಥ ಭಾರೀ ಗೂಳಿ ನೋಡಿ! 3
6. ದಿಂಬಿನ ಹಿಂದಿನ ಪಾರ್ಶ್ವ ಹೇಗೆ? 3
8. ಮಾತೇ ಮರೆತುಹೋಗುವಂತಹ ಚೆಲುವು! 3
10. ಕಾಟ ಕೊಡುವವರ ಮಾತು ಮತ್ತು ನಡವಳಿಕೆ ತುಂಬ ಕ್ರೂರ 3
12. ಮುರುಡೇಶ್ವರದ ಈಶ್ವರನ ಕೈಯಲ್ಲೂ ಇದೇ ವಾದ್ಯ 3
13. ಆತಂಕವೇಕೆ? ಪಡೆದಿದ್ದಾಯಿತಲ್ಲ ದೃಢೀಕರಣದ ಸಹಿ? 3
14. ಬೇರೆಯವರ ಕೈ ಸೇರಿತು ರೊಟ್ಟಿ ಅಂಗಡಿ 3

---

## 04—05—2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಆನಂದ 3. ಪ್ರಮಾದ 4. ಶಮನ 6. ರಜಕ 7. ಮಹೋನ್ನತ 9. ಕೊಂಕುಮಾತು 11. ಗೆಣೆಕಾರ 13. ಲಕ್ಷ ಜನ 15. ಅಂಬುಜ 17. ರಕ್ಷಿತ 18. ನರಕ 19. ರಸನ

**ಮೇಲಿನಿಂದ ಕೆಳಕ್ಕೆ**

1. ಆದರ 2. ದಶಕ 3. ಪ್ರಸನ್ನ 5. ನಸುಕು 7. ಮನೋಬೇಗೆ 8. ತರತರ 9. ಕೊಂಚಕಾಲ 10. ತುಸುದಿನ12. ಕಾತರ 14. ಕ್ಷಣಿಕ 15. ಅಂತರ 16. ಜನನ

ಪ್ರಶ್ನಾಂಕಣ

# ಸರ್ಪ ವಿಷದಿಂದ ಏನೇನು ಔಷಧ?

ಧರೆಯಲ್ಲಿ 3500 ಪ್ರಭೇದಗಳ ಸರ್ಪಗಳಿವೆ. ಆ ಪೈಕಿ 600 ಪ್ರಭೇದಗಳು ವಿಷಪೂರಿತವಾಗಿವೆ. ವಿಷಸರ್ಪಗಳಲ್ಲಿ 200 ಪ್ರಭೇದಗಳು ಮನುಷ್ಯರಿಗೂ ಜೀವ ಹಾನಿ ತರಬಲ್ಲವಾಗಿವೆ (ಅಂತಹ ಮೂರು ಪ್ರಭೇದಗಳು ಚಿತ್ರಗಳಲ್ಲಿವೆ). ಬಲಿ ಪ್ರಾಣಿಗಳನ್ನು ನಿಶ್ಚೇಷ್ಟಿತಗೊಳಿಸುವುದು ಮತ್ತು ಅವನ್ನು ಜೀರ್ಣಿಸಿಕೊಳ್ಳಲು ನೆರವು ನೀಡುವುದು ಸರ್ಪಗಳ ವಿಷದ ಮೂಲ ಉದ್ದೇಶ. ಸರ್ಪಗಳ ವಿಷವನ್ನು ಜೀವಕೋಶಗಳನ್ನು ನಾಶಗೊಳಿಸುವ ಸೈಟೋಟಾಕ್ಸಿನ್ (Cytotoxin), ರಕ್ತವನ್ನು ಗರಣೆ ಕಟ್ಟಿಸಿ ರಕ್ತ ಪರಿಚಲನೆಯನ್ನು ಸ್ಥಗಿತಗೊಳಿಸುವ ಹೇಯಿಮೋಟಾಕ್ಸಿನ್ (Haemotoxin) ಮತ್ತು ನರಮಂಡಲವನ್ನು ನಿಷ್ಕ್ರಿಯಗೊಳಿಸುವ ನ್ಯೂರೋಟಾಕ್ಸಿನ್ (Neurotoxin) ಎಂದು ತ್ರಿವಿಧಗಳಲ್ಲಿ ವರ್ಗೀಕರಿಸಲಾಗಿದೆ.

ಆದರೆ ಸರ್ಪಗಳ ಇವೇ ಪ್ರಾಣಹಾರಕ ವಿಷಗಳು ಹಲವಾರು ಜೀವರಕ್ಷಕ ಔಷಧಗಳಿಗೂ ಆಕರವಾಗಿವೆ ಗೊತ್ತೇ? ಈಗಾಗಲೇ ಜಗದಾದ್ಯಂತ ವ್ಯಾಪಕವಾಗಿ ಬಳಕೆಯಲ್ಲಿರುವ ಅಂತಹ ವಿಷಮೂಲ ಔಷಧಗಳ ಸಂಕ್ಷಿಪ್ತ ವಿವರ ಇಲ್ಲಿದೆ.

- ಯಾವುದೇ ವಿಷಸರ್ಪ ಕಚ್ಚಿದಾಗ ಮೈಸೇರುವ ವಿಷದ ಪ್ರಭಾವವನ್ನು ನಿರ್ಮೂಲನಗೊಳಿಸಿ ಜೀವ ಉಳಿಸುವ ಪ್ರತಿ ವಿಷ (Antivenin)ವನ್ನು ಸರ್ಪಗಳ ವಿಷದಿಂದಲೇ ತಯಾರಿಸಲಾಗುತ್ತದೆ. ಒಂದು ಪ್ರದೇಶದ ಎಲ್ಲ ಬಗೆಯ ವಿಷ ಸರ್ಪಗಳ ವಿಷಗಳ ಪರಿಣಾಮಗಳನ್ನು ನಿಗ್ರಹಿಸುವ ಬಹುಮುಖ ಪ್ರತಿವಿಷಗಳು (Polivalent Antivenin) ಪ್ರಸ್ತುತ ಪ್ರತಿವರ್ಷ ಲಕ್ಷಾಂತರ ಜನರ ಪ್ರಾಣವನ್ನು ಉಳಿಸುತ್ತಿವೆ. ನಮ್ಮಲ್ಲಿ ನಾಗರಹಾವು, ಕಟ್ಟುಹಾವು ಮತ್ತು ಮಂಡಲದ ಹಾವುಗಳ ಎಲ್ಲ ಪ್ರಭೇದ ಮತ್ತು ಉಪಪ್ರಭೇದಗಳ ವಿಷವನ್ನು ನಿಷ್ಕ್ರಿಯಗೊಳಿಸಬಲ್ಲ ಪಾಲಿವೇಲೆಂಟ್ ಪ್ರತಿವಿಷ ಲಭ್ಯವಿದೆ.
- ನಿರ್ದಿಷ್ಟ ಸರ್ಪ ಪ್ರಭೇದಗಳ ವಿಷದಿಂದ ತಯಾರಾಗುತ್ತಿರುವ ಮತ್ತು ಜಗತ್ತಿನ ಎಲ್ಲೆಡೆ ಬಳಕೆಯಲ್ಲಿರುವ ಜೀವರಕ್ಷಕ ಔಷಧಗಳು ಹಲವಾರಿವೆ. ಪ್ರಮುಖವಾಗಿ ಹೃದಯ ಸಂಬಂಧೀ ಅನಾರೋಗ್ಯಗಳ ಚಿಕಿತ್ಸೆಗೆ, ತೀವ್ರ ಅಧಿಕ ರಕ್ತದೊತ್ತಡದ ನಿಯಂತ್ರಣಕ್ಕೆ, ರಕ್ತ ಸ್ರಾವದ ತಡೆಗೆ ಮತ್ತು ಉಗ್ರ ನೋವುಗಳ ನಿವಾರಣೆಗೆ ಈ ಔಷಧಗಳು ಬಳಕೆಯಲ್ಲಿವೆ. ಅಧಿಕ ರಕ್ತದೊತ್ತಡದ ನಿಯಂತ್ರಣಕ್ಕೆ ಬಳಸುವ ಕ್ಯಾಪ್ಟೋಪ್ರಿಲ್ (Captopril), ರಕ್ತ ಗರಣೆ ಕಟ್ಟುವುದನ್ನು ತಡೆಯುವ ಟೈರೋಫೈಬಾನ್ (Tirofiban), ಶರೀರದ ಬಾಹ್ಯ ಮತ್ತು ಆಂತರಿಕ ರಕ್ತಸ್ರಾವವನ್ನು ತಡೆಗಟ್ಟುವ ಹೇಯಿಮೊಕೋಆಗ್ಯುಲೇಸ್ (Haemocoagulace), ಅಸಹನೀಯ ನೋವುಗಳನ್ನು ನಿವಾರಿಸುವ ಕೊಬೊರೋಟಾಕ್ಸಿನ್ (Coborotoxin) ಇವು ಅಂತಹ ಔಷಧಗಳಿಗೆ ಕೆಲವು ಉದಾಹರಣೆಗಳು. ವಿವಿಧ ಸರ್ಪ ವಿಷಗಳಿಂದ ಪಡೆಯಬಹುದಾದ ಇನ್ನೂ ಹಲವಾರು ಔಷಧಗಳು ಇನ್ನೂ ಪ್ರಾಯೋಗಿಕ ಹಂತಗಳಲ್ಲಿವೆ.




■ ಎನ್. ವಾಸುದೇವ್